# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಆಗಸ್ಟ್ 17 , 2020

ಸಂಪುಟ : 47 ಸಂಚಿಕೆ : 99 ದೂರವಾಣಿ : 254736 ವಾಟ್ಸ್‌ಆ್ಯಪ್ : 91642 99999 ಪುಟ : 4 ರೂ : 3.00 www.janathavani.com Email: janathavani@mac.com




**ಮಳೆ ಸಂತೆ** ಭಾನುವಾರ ಬೆಳಿಗ್ಗೆಯಿಂದಲೇ ಜಿಟಿ ಜಿಟಿ ಮಳೆ ಶುರುವಾದ ಹಿನ್ನೆಲೆಯಲ್ಲಿ ವಾರದ ಸಂತೆಯನ್ನು ಕೊಡೆಗಳ ಆಶ್ರಯದಲ್ಲಿ ನಡೆಸಬೇಕಾಯಿತು. ಮಳೆಯಿಂದಾಗಿ ಗ್ರಾಹಕರು ಮಾರುಕಟ್ಟೆಯತ್ತ ಹೆಜ್ಜೆ ಹಾಕದ ಪರಿಣಾಮ ವ್ಯಾಪಾರ ಕಡಿಮೆ ಇತ್ತು.

# ಅಧಿವೇಶನಕ್ಕೆ ಹೊಸತನ

## ಬೆಳಿಗ್ಗೆ - ರಾತ್ರಿ ಪಾಳಿಯಲ್ಲಿ ಸಂಸತ್ ಅಧಿವೇಶನ, ಚೇಂಬರ್ ಗ್ಯಾಲರಿ ಬಳಕೆ

ನವದೆಹಲಿ, ಆ. 16 - ಕೊರೊನಾ ಪರಿಸ್ಥಿತಿಯ ನಡುವೆಯೇ ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಸಿದ್ಧತೆಗಳು ನಡೆಯುತ್ತಿದ್ದು, ಈ ಬಾರಿಯ ಅಧಿವೇಶನ ಸಾಮಾಜಿಕ ಅಂತರಕ್ಕಾಗಿ ಹಲವಾರು ಬದಲಾವಣೆಗಳು ಹಾಗೂ ಹೊಸತನಗಳನ್ನು ಕಾಣಲಿದೆ.

ಮುಂಗಾರು ಅಧಿವೇಶನ ಆಗಸ್ಟ್ ಕೊನೆ ವಾರ ಇಲ್ಲವೇ ಸೆಪ್ಟೆಂಬರ್ ಮೊದಲ ವಾರದಲ್ಲಿ ಆರಂಭವಾಗುವ ನಿರೀಕ್ಷೆ ಇದೆ.

ರಾಜ್ಯಸಭಾ ಕಾರ್ಯಾಲಯದ ಪ್ರಕಾರ, ಮೇಲ್ಮನೆಯ ಸದಸ್ಯರು ಅಧಿವೇಶನದ ವೇಳೆ ಛೇಂಬರ್ ಹಾಗೂ ಗ್ಯಾಲರಿ ಎರಡರಲ್ಲೂ ಕುಳಿತುಕೊಳ್ಳಲಿದ್ದಾರೆ.

1952ರ ನಂತರ ಭಾರತೀಯ ಸಂಸತ್ತಿನ



ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ರೀತಿಯ ವ್ಯವಸ್ಥೆ ಮಾಡಲಾಗುತ್ತಿದೆ. ರಾಜ್ಯಸಭೆಯ 60 ಸದಸ್ಯರು ಚೇಂಬರ್‌ನಲ್ಲಿ ಹಾಗೂ 51 ಸದಸ್ಯರು ಗ್ಯಾಲರಿಯಲ್ಲಿ ಹಾಗೂ ಉಳಿದ 132 ಜನರು ಲೋಕಸಭೆಯ ಚೇಂಬರ್‌ನಲ್ಲಿ ಕುಳಿತುಕೊಳ್ಳಲಿದ್ದಾರೆ.

ಇದೇ ರೀತಿ ಲೋಕಸಭಾ ಕಾರ್ಯಾಲಯ ಸಹ ವ್ಯವಸ್ಥೆ ಮಾಡಿಕೊಳ್ಳಲುತ್ತಿದೆ. ಇದೇ ಮೊದಲ ಬಾರಿಗೆ ಗ್ಯಾಲರಿಯಲ್ಲಿ ಪಾಲ್ಗೊಳ್ಳುವವರಿಗೆ ಬೃಹತ್ ತೆರೆಗಳು, ಸೋಂಕು ನಿವಾರಕಗಳು, ಉಭಯ ಸದನಗಳ ನಡುವೆ ವಿಶೇಷ ಕೇಬಲ್‌ಗಳು ಹಾಗೂ ಪಾಲಿಕಾರ್ಬೊನೇಟ್ ಪ್ರತ್ಯೇಕತಾ ವಿಧಾನಗಳನ್ನು ಅಳವಡಿಸಲಾಗುತ್ತಿದೆ.

ರಾಜ್ಯಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಹಾಗೂ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಜುಲೈ 17ರಂದು ಸಭೆ ನಡೆಸಿ ಸದನ ನಡೆಸಲು ಇರುವ ಆಯ್ಕೆಗಳ ಕುರಿತು ಚರ್ಚಿಸಿದ್ದರು. ಈ ಸಂದರ್ಭದಲ್ಲಿ ಉಭಯ ಸದನಗಳ ಚೇಂಬರ್ ಹಾಗೂ ಗ್ಯಾಲರಿಗಳನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿತ್ತು.

ಅಧಿಕಾರಿಗಳು ಆಗಸ್ಟ್ (3ನೇ ಪುಟಕ್ಕೆ)

## ಕಿಸಾನ್ ಸಮ್ಮಾನ್ ಯೋಜನೆ ಸಾವಿರ ಕೋಟಿ ರೂ. ಬಿಡುಗಡೆ

ಬೆಂಗಳೂರು, ಆ. 16 - ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ 1 ಸಾವಿರ ಕೋಟಿ ರೂ.ಗಳನ್ನು ರಾಜ್ಯದ 50 ಲಕ್ಷ ರೈತರಿಗೆ ಬಿಡುಗಡೆಯಾಗಿದ್ದು, ಕಳೆದ ಶನಿವಾರದಿಂದ ರೈತರ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ. ಫೇಸ್‌ಬುಕ್ ಲೈವ್‌ನಲ್ಲಿ ರಾಜ್ಯದ ರೈತ (3ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 177 ಅಡಿ 10 ಇಂಚು
ಒಳ ಹರಿವು : 7617 ಕ್ಯೂಸೆಕ್ಸ್
ಹೊರ ಹರಿವು : 3138 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 183.11 ಅಡಿ

## ಮುಂದಿನ ವಾಲ್ಮೀಕಿ ಜಾತ್ರೆ ವೇಳೆಗೆ ಸುಸಜ್ಜಿತ ರಥ : ಸಚಿವ ಸಿಂಗ್




ಮಲೇಬೆನ್ನೂರು, ಆ. 16- ಮುಂದಿನ ವಾಲ್ಮೀಕಿ ಜಾತ್ರೆ ವೇಳೆಗೆ ಸುಮಾರು 1.27 ಕೋಟಿ ರೂ. ವೆಚ್ಚದ ವಾಲ್ಮೀಕಿ ತೇರನ್ನು ಸ್ವಂತ ಖರ್ಚಿನಲ್ಲಿ ನಿರ್ಮಿಸಿಕೊಡುವುದಾಗಿ ಅರಣ್ಯ ಸಚಿವ ಆನಂದ್ ಸಿಂಗ್ ಶ್ರೀಗಳಿಗೆ ಮಾತು ಕೊಟ್ಟರು.

ಅವರು ಭಾನುವಾರ ರಾಜನಹಳ್ಳಿ ವಾಲ್ಮೀಕಿ ಗುರುಪೀಠಕ್ಕೆ ಭೇಟಿ ನೀಡಿ, ಲಿಂಗೈಕ್ಯ ಶ್ರೀ ಪುಣ್ಯಾನಂದ ಪುರಿ ಶ್ರೀಗಳವರ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರ ಆಶೀರ್ವಾದ ಪಡೆದುಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು

ಲಿಂಗೈಕ್ಯ ಜಗದ್ಗುರು ಪುಣ್ಯಾನಂದ ಪುರಿ ಶ್ರೀಗಳವರ ಪ್ರೇರಣೆಯಿಂದಾಗಿಯೇ ನಾನು ರಾಜಕೀಯಕ್ಕೆ ಬಂದಿದ್ದು, ನನ್ನ ರಾಜಕೀಯ ಬೆಳವಣಿಗೆಯಲ್ಲಿ ವಾಲ್ಮೀಕಿ ಸಮಾಜದ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ಸ್ಮರಿಸಿದ ಆನಂದ್ ಸಿಂಗ್, ಶ್ರೀಗಳು ಸಮಾಜದ ಅಭಿವೃದ್ಧಿ ಮತ್ತು ಸಂಘಟನೆಗಾಗಿ ಕೈಗೊಳ್ಳುವ ಎಲ್ಲಾ ಹೋರಾಟದಲ್ಲೂ ನಾನು ಅವರ ಜೊತೆಯಾಗಿ ರುತ್ತೇನೆ. ವಾಲ್ಮೀಕಿ ರಥ ನಿರ್ಮಿಸುವ ಕುರಿತು ಶ್ರೀಗಳು ನನಗೆ ನೀಡಿರುವ ಯೋಜನೆ ಪ್ರಕಾರ ಸುಸಜ್ಜಿತವಾದ ರಥವನ್ನೇ ತಯಾರು ಮಾಡಿಸಿಕೊಡುತ್ತೇನೆ ಎಂದರು.

**ಖಾತೆ ಬದಲಾವಣೆ ಬಗ್ಗೆ ಕೇಳಿಲ್ಲ:** ನನ್ನ ಬಳಿ ಈಗಿರುವ ಖಾತೆಯನ್ನು ಬದಲಾವಣೆ ಮಾಡಿ ಎಂದು ನಾನೇನು ಸಿಎಂ ಅವರನ್ನು ಕೇಳಿಲ್ಲ. ಈಗಿರುವ ಖಾತೆಯನ್ನೇ ಸರಿಯಾಗಿ ನಿಭಾಯಿಸುತ್ತೇನೆ. ಈಗಿನ ಪರಿಸ್ಥಿತಿಯಲ್ಲಿ ಹೆಚ್ಚುವರಿ ಸಿಗುವುದು ಕಷ್ಟ (2ನೇ ಪುಟಕ್ಕೆ)

## 218 ಪಾಸಿಟಿವ್, 109 ಬಿಡುಗಡೆ



ದಾವಣಗೆರೆ, ಆ. 16 - ಜಿಲ್ಲೆಯಲ್ಲಿ ಭಾನುವಾರ 218 ಕೊರೊನಾ ಸೋಂಕು ಪ್ರಕರಣಗಳು ದೃಢಪಟ್ಟಿದ್ದು, ಮೂವರು ಸಾವನ್ನಪ್ಪಿದ್ದಾರೆ. 109 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದು, 1629 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 97, ಹರಿಹರ 30, ಜಗಳೂರು 9, ಚನ್ನಗಿರಿ 25, ಹೊನ್ನಾಳಿ 47 ಹಾಗೂ ಹೊರ ಜಿಲ್ಲೆಯ 10 ಜನರಲ್ಲಿ ಸೋಂಕು ಪತ್ತೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 76, ಹರಿಹರ 13, ಜಗಳೂರು 4, ಚನ್ನಗಿರಿ 7, ಹೊನ್ನಾಳಿ 5 ಹಾಗೂ (3ನೇ ಪುಟಕ್ಕೆ)




24ನೇ ವರ್ಷದ ಪುಣ್ಯಸ್ಮರಣೆ
ಹೆಚ್. ಬೀರಪ್ಪ
(ನಿಧನ : 17.08.1996)
ನೀವು ನಮ್ಮನ್ನಗಲಿ ಇಂದಿಗೆ 24 ವರ್ಷಗಳಾದವು.
ಸದಾ ನಿಮ್ಮ ನೆನಪು ಮತ್ತು ಮಾರ್ಗದರ್ಶನದಲ್ಲಿರುವ.....
✦ ಹೆಚ್. ಬೀರಪ್ಪ ಅಂಡ್ ಸನ್ಸ್, ವರ್ತಕರು
ಮಕ್ಕಳಾದ : ✦ ಹೆಚ್.ಬಿ. ಗೋಣೆಪ್ಪ, ಮಾಜಿ ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.
ಶ್ರೀಮತಿ ಕರಿಬಸಮ್ಮ ಮತ್ತು ಮಕ್ಕಳು ✦ ಹೆಚ್.ಬಿ. ರೇವಣಪ್ಪ, ಶ್ರೀಮತಿ ಸೌಭಾಗ್ಯಮ್ಮ ಮತ್ತು ಮಕ್ಕಳು
✦ ಹೆಚ್.ಬಿ. ಮಂಜುನಾಥ, ಶ್ರೀಮತಿ ನಾಗರತ್ನಮ್ಮ ಮತ್ತು ಮಕ್ಕಳು
✦ ಬಿ. ರಾಜು ಶ್ರೀಮತಿ ವಸಂತಲಕ್ಷ್ಮಿ ಮತ್ತು ಮಕ್ಕಳು ✦ ಹೆಚ್.ಬಿ. ಉಮೇಶ, ಶ್ರೀಮತಿ ಶಾರದಮ್ಮ ಹಾಗೂ ಚಿ|| ಸಹನ ✦ ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು
ಬೆನಕನಹಳ್ಳಿ ಎಂ. ಇಸ್ಮಾಯಿಲ್ ಸಾಹೇಬ್ ಅಂಡ್ ಸನ್, ಮರ್ಚೆಂಟ್ಸ್





ಶ್ರೀ ಪಿ. ವಾಮಣ್ಣನವರು
ನಿಧನ: 04-08-2020

||ಶ್ರೀ ಮಾಳ್ಸಸಾ ಪ್ರಸನ್ನ ||
ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ
ಶ್ರೀಮತಿ ಶಕುಂತಲಬಾಯಿ ವಿ. ವೆರ್ಣೇಕರ್
ಪಾಂಡುರಂಗಪ್ಪನವರ ಶ್ರೀ ಗುರು ಮಹಾರಾಜ ಜ್ಯೂಯಲರಿ ಮಾರ್ಟ್, ಮಂಡಿಪೇಟೆ, ದಾವಣಗೆರೆ.
ಇವರು ಮಾಡುವ ವಿಜ್ಞಾನಪನೆಗಳು
ದಿನಾಂಕ: 04.08.2020ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ
ನನ್ನ ಪೂಜ್ಯ ಪತಿಯವರಾದ
(ಗುರು ಪ್ರಸಾದ್ ಇವರ ಪೂಜ್ಯ ತಂದೆಯವರಾದ)
ಶ್ರೀ ಪಿ. ವಾಮಣ್ಣನವರು
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ವೈಕುಂಠ ಸಮಾರಾಧನೆಯನ್ನು
ದಿನಾಂಕ: 17-08-2020 ನೇ ಸೋಮವಾರ ಮಧ್ಯಾಹ್ನ 12.30ಕ್ಕೆ
ಶ್ರೀ ದೈವಜ್ಞ ಕಲ್ಯಾಣ ಮಂಟಪ, ಪಿ.ಬಿ.ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲು
ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತ :
ಶ್ರೀಮತಿ ಶಕುಂತಲಬಾಯಿ ವೆರ್ಣೇಕರ್ ಮತ್ತು ಮಕ್ಕಳು
ಸಹೋದರರು, ಸಹೋದರಿಯರು, ಅಳಿಯಂದಿರು,
ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು
✧ ಮೆ|| ಪಾಂಡುರಂಗ ಬೋಮಯ್ಯ ವೆರ್ಣೇಕರ್ ಜ್ಯೂಯಲರ್ಸ್, (ದೊಡ್ಡಪೇಟೆ)
✧ ಮೆ|| ಪಾಂಡುರಂಗ ಬೋಮಯ್ಯ ವೆರ್ಣೇಕರ್ ಜ್ಯೂಯಲರ್ಸ್, (ಮಂಡಿಪೇಟೆ)
✧ ಶ್ರೀ ಗುರು ಮಹಾರಾಜ ಜ್ಯೂಯಲರಿ ಮಾರ್ಟ್, (ಮಂಡಿಪೇಟೆ)
✧ ಶ್ರೀ ಚೈತನ್ಯ ಜ್ಯೂಯಲರಿ ಮಾರ್ಟ್, (ಚಾಮರಾಜಪೇಟೆ)
✧ ಶ್ರೀ ಸದ್ಗುರು ಜ್ಯೂಯಲರ್ಸ್ , (ಮಂಡಿಪೇಟೆ)
✧ ಶ್ರೀ ಮಾಳ್ಸಸ ಜ್ಯೂಯಲರ್ಸ್ , (ಮಂಡಿಪೇಟೆ)
✧ ಶ್ರೀ ಸರಸ್ವತಿ ಪಾಂಡುರಂಗ ವೆರ್ಣೇಕರ್ ಜ್ಯೂಯಲರ್ಸ್, (ಮಂಡಿಪೇಟೆ)

# ಜಗಳೂರಿನಲ್ಲಿ ಸುಸಜ್ಜಿತ ಪತ್ರಕರ್ತರ ಭವನ ನಿರ್ಮಾಣ

ಜಗಳೂರು, ಆ.16 - ವಿವಿಧ ಅನುದಾನಗಳನ್ನು ಕ್ರೋಢೀಕರಿಸಿ ಸುಮಾರು 20 ಲಕ್ಷ ರೂ.ಗಳ ವೆಚ್ಚದಲ್ಲಿ ಸುಸಜ್ಜಿತ ಪತ್ರಕರ್ತರ ಭವನ ನಿರ್ಮಿಸಿಕೊಡುತ್ತೇನೆ ಎಂದು ಶಾಸಕರು, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರಾದ ಎಸ್.ವಿ ರಾಮಚಂದ್ರ ಹೇಳಿದರು.

ಇಲ್ಲಿನ ವಿದ್ಯಾನಗರದಲ್ಲಿ ಶನಿವಾರ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕಳೆದ ಐದಾರು ತಿಂಗಳಿಂದಲೂ ತಾಲ್ಲೂಕು ಆಡಳಿತದ ಜತೆಯಲ್ಲಿ ಪತ್ರಕರ್ತರು ಕೊರೊನಾ ವೈರಾಣು ಜಾಗೃತಿ ಮೂಡಿಸಲು ವಾರಿಯರ್ಸ್‌ಗಳಾಗಿ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪತ್ರಕರ್ತರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ವಾಸ್ತವ ವರದಿಗಳನ್ನ ಬರೆಯಬೇಕು. ವಿರೋಧ ಪಕ್ಷದವರು ಮಾಡುವ ಸುಳ್ಳು ಆರೋಪಗಳಿಗೆ ಹೆಚ್ಚಿನ ಪ್ರಚಾರ ನೀಡುವುದು ಸರಿಯಲ್ಲ ಎಂದರು.

ಕೊರೊನಾ ಹಾವಳಿಯ ನಡುವೆಯೂ ಕ್ಷೇತ್ರ ಅಭಿವೃದ್ಧಿಯಲ್ಲಿ ದಾಪುಗಾಲಿಡುತ್ತಿದೆ, ಯಾರೋ ಗೊತ್ತಿಲ್ಲದವರು, ಅಧಿಕಾರದಲ್ಲಿದ್ದಾಗ ಏನೂ ಸಾಧನೆ ಮಾಡದವರು ಈಗ ನಮಗೆ ಶೂನ್ಯ ಸಾಧನೆ ಮಾಡಿದ್ದಾರೆಂದು ನನ್ನ ಬಗ್ಗೆ ಹೇಳಿದ್ದಾರೆ. ಆದರೆ, ನನ್ನ ಸಾಧನೆ ಕ್ಷೇತ್ರದ ಜನರ ಮುಂದಿದೆ ಎಂದರು.

ಸಿರಿಗೆರೆಯ ಡಾ. ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ಬರದನಾಡು ಜಗಳೂರನ್ನು ಹಸಿರನ್ನಾಗಿ ಮಾಡುವ ಸಂಕಲ್ಪದಿಂದ ಸರ್ಕಾರಗಳ ಮೇಲೆ ಒತ್ತಡ ಹಾಕಿದ್ದರಿಂದ 57 ಕೆರೆಗಳಿಗೆ




## ಶಾಸಕ ರಾಮಚಂದ್ರ

ನೀರು ತುಂಬಿಸುವ ಯೋಜನೆಗೆ ಅಂದಿನ ಸಿಎಂ ಸಿದ್ದರಾಮಯ್ಯನವರು 260 ಕೋಟಿ ಮಂಜೂರಾತಿ ನೀಡಿದ್ದರು. ಎಚ್.ಡಿ ಕುಮಾರ್‌ಸ್ವಾಮಿ ನೀರು ಹಂಚಿಕೆ ಮಾಡಿದರು. ಬಿ.ಎಸ್ ಯಡಿಯೂರಪ್ಪ ಹಣ ಬಿಡುಗಡೆ ಮಾಡಿದ್ದು, ಪೈಪ್‌ಲೈನ್ ಕಾಮಗಾರಿ ಆರಂಭವಾಗಿದೆ. ಮುಂದಿನ ವರ್ಷದ ಇದೇ ವೇಳೆ ಕೆರೆಗಳಲ್ಲಿ ನೀರು ಬರುವುದು ಖಚಿತ ಎಂದರು.

ಅಪ್ಪರ್‌ಭದ್ರಾ ಯೋಜನೆಯೂ ಕೂಡ ಬಿ.ಎಸ್ ಯಡಿಯೂರಪ್ಪ ಅವರಿಂದ 2.4 ಟಿಎಂಸಿ ನೀರಿಗೆ ಮಂಜೂರಾತಿ ಮಾಡಿಸಿ ನೀರು ಹಂಚಿಕೆ ಮಾಡಿಸಲಾಗಿತ್ತು. ನಂತರ ಬಂದ ಸರ್ಕಾರ ಯಾವ ಕೆಲಸ ಮಾಡಲಿಲ್ಲ, ಆದರೆ ಬಿಜೆಪಿ ಸರ್ಕಾರ ಬಂದ ಮೇಲೆ ಸರ್ವೇ ಕೆಲಸ ಮುಗಿಸಲಾಗಿದ್ದು, ಸುಮಾರು 1200 ಕೋಟಿ ವೆಚ್ಚದಲ್ಲಿ 40 ಸಾವಿರ ಎಕರೆ ಪ್ರದೇಶವನ್ನು ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.

ಸಿದ್ದರಾಮಯ್ಯನವರು 2800 ಕೋಟಿಯಲ್ಲಿ ತುಂಗಾಭದ್ರಾ ಹಿನ್ನೀರಿನಿಂದ ಎಸ್ಸಿ ಮತ್ತು ಎಸ್ಟಿ ಸಮುದಾಯಗಳಿರುವ ಕ್ಷೇತ್ರಗಳಿಗೆ ನೀರು ಕೊಡುವ ಮಹತ್ವದ ಯೋಜನೆ ಜಾರಿಗೆ ತಂದರು, ಅಂದಿನ ಶಾಸಕರ ನಿರ್ಲಕ್ಷದಿಂದ ಜಗಳೂರು ತಾಲ್ಲೂಕು ಕೈತಪ್ಪುವಂತಾಯಿತು. ನಾನಿದ್ದಿದ್ರೆ ರಕ್ತ ಹರಿಸಿಯಾದರು ನೀರು ತರುತ್ತಿದ್ದೇ, ಈಗ ಸಿಎಂ ಬಿಎಸ್‌ವೈ ಮೇಲೆ ಒತ್ತಡ ಹಾಕಿ ಕನಿಷ್ಠ ಐದಾರು ಗ್ರಾಮಗಳಿಗಾದರೂ ನೀರು ಕೊಡಿಸುವ ಪ್ರಯತ್ನ ಮಾಡುತ್ತೇನೆ ಎಂದು ರಾಮಚಂದ್ರ ಭರವಸೆ ನೀಡಿದರು.

ಜಿ.ಪಂ ಸದಸ್ಯ ಎಸ್.ಕೆ ಮಂಜುನಾಥ್, ತಾ.ಪಂ ಸದಸ್ಯ ಸಿದ್ದೇಶ್, ಸಂಘದ ಜಿಲ್ಲಾ ಉಪಾಧ್ಯಕ್ಷ ಅಣಬೂರು ಕೊಟ್ರೇಶ್, ಮಾಜಿ ಜಿಲ್ಲಾ ಉಪಾಧ್ಯಕ್ಷ ಬಿ.ಪಿ ಸುಭಾನ್ ಮಾತನಾಡಿದರು. ಸಂಘದ ಅಧ್ಯಕ್ಷ ಜಿ.ಎಸ್ ಚಿದಾನಂದಪ್ಪ ಅಧ್ಯಕ್ಷತೆ ವಹಿಸಿದ್ದರು.

ನೂತನ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ಹಾಗೂ ಕರೊನಾ ವಾರಿಯರ್ಸ್‌ಗಳಾದ ತಹಸೀಲ್ದಾರ್ ಡಾ. ನಾಗವೇಣಿ, ತಾಲೂಕು ಆರೋಗ್ಯಾಧಿಕಾರಿ ಡಾ. ನಾಗರಾಜ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ್ವರಪ್ಪ, ಸಿಪಿಐ ದುರುಗಪ್ಪ ಇವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಿ.ಪಂ. ಸದಸ್ಯರಾದ ಶಾಂತಕುಮಾರಿ ಶಶೀಧರ್, ಉಮಾವೆಂಟಕೇಶ್, ಸವಿತಾ ಕಲ್ಲೇಶಪ್ಪ, ಶಾಸಕರ ಪುತ್ರ ಅಜೇಂದ್ರ ಸಿಂಹ,ಬಿಜೆಪಿ ತಾಲೂಕಾಧ್ಯಕ್ಷ ಎಚ್.ಸಿ ಮಹೇಶ್, ಮಾಜಿ ಅಧ್ಯಕ್ಷ ಡಿ.ವಿ ನಾಗಪ್ಪ, ಮಾಜಿ ಜಿ,ಪಂ.ಸದಸ್ಯ ಹೆಚ್,ನಾಗರಾಜ್, ತಾ.ಪಂ ಇಒ ಮಲ್ಲನಾಯ್ಕ,ಪ,ಪಂ ಮುಖ್ಯಾದಿಕಾರಿ ರಾಜು ಬಣಕಾರ್ ಮತ್ತಿತರರು ಉಪಸ್ತಿತರಿದ್ದರು.

# ಕೊರೊನಾ : 218 ಪಾಸಿಟಿವ್, 109 ಬಿಡುಗಡೆ

(1ನೇ ಪುಟದಿಂದ) ಹೊರ ಜಿಲ್ಲೆಯ 4 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

ದಾವಣಗೆರೆ ನಿಜಲಿಂಗಪ್ಪ ಬಡಾವಣೆಯ 11 ವರ್ಷದ ಬಾಲಕಿ, ಎಸ್.ಎಸ್. ಹಾಸ್ಪಿಟಲ್ ಬಳಿ 30ರ ಯುವತಿ, ಸರಸ್ವತಿ ಬಡಾವಣೆಯ 53ರ ಪುರುಷ, ಕೊಂಡಜ್ಜಿ ರಸ್ತೆಯ 37ರ ಪುರುಷ, ಕೋಡಿಹಳ್ಳಿಯ 62ರ ಮಹಿಳೆ, 7ರ ಬಾಲಕಿ, 12ರ ಬಾಲಕಿ, ರಿಂಗ್ ರಸ್ತೆ ಎಲ್.ಐ.ಸಿ. ಕಚೇರಿ ಬಳಿಯ 38ರ ಪುರುಷ,

ಬಾಪೂಜಿ ಬಾಯ್ಸ್ ಹಾಸ್ಟೆಲ್‌ನ 25ರ ಪುರುಷ, ಶ್ರೀರಾಮ ಬಡಾವಣೆ ನಿಟುವಳ್ಳಿಯ 50ರ ಪುರುಷ, ಯಲ್ಲಮ್ಮನಗರದ 48ರ ಪುರುಷ, ಚಲುವಾದಿ ಕೇರಿಯ 52ರ ಮಹಿಳೆ, ಚಿಕ್ಕನಹಳ್ಳಿಯ 37ರ ಪುರುಷ, ರಾಜೇಶ್ವರಿ ಡಪಾವಣೆಯ 54ರ ಪುರುಷ, ಕಕ್ಕರಗೊಳ್ಳದ 64ರ ಪುರುಷ, ಮಣಿಕಂಠ ವೃತ್ತದ ಬಳಿಯ 64ರ ಪುರುಷ, ಶ್ರೀರಾಮ ಬಡಾವಣೆಯ 39ರ ಪುರುಷ, 26ರ ಪುರುಷ,

ದೊಡ್ಡಬಾತಿಯ 61ರ ಪುರುಷ, 30ರ ಮಹಿಳೆ, 40ರ ಮಹಿಳೆ, ಪಿಜೆ ಬಜಾವಣೆ 7ನೇ ಕ್ರಾಸ್‌ನ 60ರ ಮಹಿಳೆ, ವಿನೋಬನಗರ 11ನೇ ಕ್ರಾಸ್‌ನ 35ರ ಪುರುಷ, ಆವರಗೆರೆ ಪಿಬಿ ಬಡಾವಣೆ 33ರ ಪುರುಷ, ಎಲೆಬೇತೂರು ರಸ್ತೆಯ 54ರ ಮಹಿಳೆ, ಶಾಮನೂರಿನ 49ರ ಮಹಿಳೆ, ಎಂ.ಸಿ.ಸಿ. ಎ ಬ್ಲಾಕ್‌ನ 68ರ ಪುರುಷ, ವಿದ್ಯಾನಗರ 3ನೇ ಮೇನ್ 70ರ ಪುರುಷ, ದೊಡ್ಡ ಬಾತಿಯ 58ರ ಪುರುಷ, ಸಿದ್ದೇಶ್ವರ ಬಡಾವಣೆ 8ನೇ ಕ್ರಾಸ್‌ನ 50ರ ಪುರುಷ, 25ರ ಮಹಿಳೆ, ಎಸ್.ಪಿ.ಎಸ್. ನಗರ 2ನೇ ಕ್ರಾಸ್‌ನ 5ರ ಬಾಲಕಿ, ಕೊರಚರಹಟ್ಟಿಯ 50ರ ಮಹಿಳೆ, ಚಿಕ್ಕತೊಗಲೇರಿಯ 52ರ ಪುರುಷ, ಸಿದ್ದವೀರಪ್ಪ ಬಡಾವಣೆ 11ನೇ ಕ್ರಾಸ್‌ನ 40ರ ಪುರುಷ.

ಕುಂಬಾರ ಪೇಟೆಯ 55ರ ಮಹಿಳೆ, ಸಿದ್ದವೀರಪ್ಪ ಬಡಾವಣೆ 7ನೇ ಕ್ರಾಸ್‌ನ 33ರ ಪುರುಷ, ಶಿವಕುಮಾರ ಸ್ವಾಮಿ ಬಡಾವಣೆ 9ನೇ ಕ್ರಾಸ್‌ನ 59ರ ಪುರುಷ, ನಿಜಲಿಂಗಪ್ಪ ಬಡಾವಣೆ 2ನೇ ಮೇನ್‌ನ 40ರ ಪುರುಷ, ದೇವರಾಜ ಅರಸ ಕಾಲೋನಿಯ 56ರ ಪುರುಷ, ಆವರೆಗೆರೆಯ 70ರ ಮಹಿಳೆ, ಕಬ್ಬೂರಿನ 50ರ ಪುರುಷ.

ಆಲೂರಿನ 65ರ ಪುರುಷ, 95ರ ವೃದ್ಧೆ, ಆಲೂರುಹಟ್ಟಿಯ 36ರ ಮಹಿಳೆ, 30ರ ಮಹಿಳೆ, 28ರ ಪುರುಷ, ರಾಜೇಂದ್ರ ಬಡಾವಣೆಯ 46ರ ಪುರುಷ, ಚೌಡೇಶ್ವರಿ ನಗರದ 60ರ ಮಹಿಳೆ, ಹೊಂಡದ ವೃತ್ತದ ಬಳಿಯ 58ರ ಪುರುಷ, ಮಾಯಕೊಂಡದ 60ರ ಪುರುಷ, ಶೇಖರಪ್ಪ ಬಡಾವಣೆ ಆವರಗೆರೆಯ 58ರ ಪುರುಷ, ಸಿದ್ದವೀರಪ್ಪ ಬಡಾವಣೆಯ 60ರ ಪುರುಷ, ಆನಗೋಡಿನ 52ರ ಮಹಿಳೆ, ಹೊನ್ನಮರಡಿಯ 50ರ ಪುರುಷ.

ಡೆಂಟಲ್ ಕಾಲೇಜು ಸಿಬ್ಬಂದಿ 48ರ ಮಹಿಳೆ, ಚಿಕ್ಕಮ್ಮಣ್ಣಿ ಬಡಾವಣೆ 32ರ ಪುರುಷ, ಚಿಗಟೇರಿ ಆಸ್ಪತ್ರೆಯ 22 ಪುರುಷ, ಹಳೇ ಬಸ್ ನಿಲ್ದಾಣದ ಎದುರು 28 ಪುರುಷ, ಉತ್ತರ ಪೊಲೀಸ್ ಠಾಣೆಯ 45ರ ಪುರುಷ, ಶಿವಕುಮಾರ ಸ್ವಾಮಿ ಬಡಾವಣೆಯ 39 ಪುರುಷ, ಎಂ.ಬಿ. ಕೆರೆಯ 65ರ ಪುರುಷ, ಆಲೂರಿನ 80ರ ಪುರುಷ, ಭಗತ್ ಸಿಂಗ್ ನಗರದ 52ರ ಪುರುಷ, ಎಂ.ಸಿ. ಕಾಲೋನಿ ಯ55ರ ಪುರುಷ, ಕೆಟಿಜೆ ನಗರದ 70ರ ವೃದ್ಧೆ, ಮೆಳ್ಳೆಕಟ್ಟೆಯ 50ರ ಪುರುಷ, ಹಗೇದಿಬ್ಬ ವೃತ್ತದ ಬಳಿಯ 38ರ ಮಹಿಳೆ, ತರಳಬಾಳು ಬಡಾವಣೆ 6ನೇ ಕ್ರಾಸ್‌ನ 30ರ ಪುರುಷ, ರಾಜೀವ್ ಗಾಂಧಿ ಬಡಾವಣೆಯ 35ರ ಪುರುಷ, ಹಳೇಕೋಳೇನಹಳ್ಳಿಯ 19ರ ಮಹಿಳೆ, ಹೊಸ ಕುಂದುವಾಡದ 24ರ ಮಹಿಳೆ, ಶಿವಾಜಿ ನಗರದ 21ರ ಪುರುಷ ಸೇರಿದಂತೆ 218 ಜನರಲ್ಲಿ ಸೋಂಕು ಪತ್ತೆಯಾಗಿದೆ.

## ವಿಷ್ಣು ಸಹಸ್ರನಾಮ ಪಠಣ



ದಾವಣಗೆರೆ, ಆ. 12- ಕೊರೊನಾ ನಿರ್ಮೂಲನೆಗಾಗಿ ರಾಷ್ಟ್ರ ಸೇವಿಕ ಸಮಿತಿಯ ಸೇವಕಿಯರು ಪ್ರತಿ ದಿನವೂ ವಿಷ್ಣು ಸಹಸ್ರನಾಮ ಪಠಣವನ್ನು ಮನೆಯಿಂದಲೇ ಆನ್ ಲೇನ್ ನಲ್ಲಿ ನಡೆಸುತ್ತಿದ್ದಾರೆ.

## ಕಿಸಾನ್ ಸಮ್ಮಾನ್ ಯೋಜನೆ

(1ನೇ ಪುಟದಿಂದ) ಸಮುದಾಯವನ್ನುದ್ದೇಶಿಸಿ ಮಾತನಾಡಿರುವ ಸಚಿವರು, ರೈತರು ತಮ್ಮ ಖಾತೆಯನ್ನು ಪರಿಶೀಲಿಸಬೇಕೆಂದು ಮನವಿ ಮಾಡಿದ್ದಾರೆ. 2019-20ನೇ ಸಾಲಿನ ಬೆಳೆ ವಿಮೆ ಬರುವ ಮಂಗಳವಾರದಿಂದ ರೈತರ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದ್ದು, ವಿಮೆಗಾಗಿ ರೈತರು ಯಾವುದೇ ಕಾರಣಕ್ಕೂ ಆತಂಕಕ್ಕೊಳಗಾಗುವುದಾಗಲೀ ಚಿಂತಿಸುವ ಅವಶ್ಯಕತೆಯಿಲ್ಲ. ಸರ್ಕಾರ ಮತ್ತು ಇಲಾಖೆ ಎಂದಿಗೂ ರೈತರೊಂದಿಗೆ ಸದಾ ಬೆನ್ನೆಲುಬಾಗಿ ನಿಲ್ಲಲಿದೆ ಎಂದೂ ಅವರು ಹೇಳಿದ್ದಾರೆ.

### ಭಾರತದ ಪರಿಚಯ

ಹೇ ಭಾರತ ಮಾತೆ...
ಈ ಮಣ್ಣು ನಿನ್ನದು
ಈ ಜಲವೂ ನಿನ್ನದು ।
ಎರಡರಿಂದಲೂ ಆದ
ನಮ್ಮ ಜೀವವೂ ನಿನ್ನದೂ ।।ಅ।।
ಹೇ ಭಾರತ ಮಾತೆ... ನಾವು ನಿನ್ನವರೂ।। ಪ।।

ನಮ್ಮ ನಗುವು ನಿನ್ನದು
ನಮ್ಮ ಒಲವು ನಿನ್ನದು ।
ನಮ್ಮ ಗೆಲವು ನಿನ್ನದು
ನಮ್ಮ ಜೀವ ನೀನೆ ಕಾಣೇ...।
ನಿನ್ನ ಗೆಲುವು ನಮ್ಮದು
ನಿನ್ನ ಒಲವು ನಮ್ಮದು ।
ನಿನ್ನ ನಗುವು ನಮ್ಮದು
ನಮ್ಮ ಉಸಿರು ನೀನೆ ಕಾಣೇ...।। ೧।।

ಜೀವನ ಶೈಲಿ ನಿನ್ನದು
ಪ್ರಕೃತಿ ನಿಯಮ ನಿನ್ನದು ।।
ಗಾಳಿ ನೀರು ನಿನ್ನದು
ಪರಿಸರ ಮಾತೆ ನೀನೆ ಕಾಣೇ...।
ಜನಗಳ ಜನ್ಮ ನಿನ್ನದು
ಜನಗಳ ಪ್ರೀತಿ ನಿನ್ನದು।
ಜನಗಳ ನೋವು ನಿನ್ನದು
ಜನಗಳ ಮನ ನೀನೆ ಕಾಣೇ... ।।೨।।

ಭಾರತೀಯರ ಜಯವು ನಿನ್ನದು
ಭಾರತೀಯ ಖುಷಿಯು ನಿನ್ನದು ।
ಭಾರತೀಯರ ನೋವು ನಿನ್ನದು
ಭಾರತೀಯರ ಗರ್ವ ನೀನೇ ಕಾಣೇ...।

ಅನ್ನ ಬೀರುವ / ಕೊಡುವ ಮಣ್ಣು ನಿನ್ನದು
ಜೀವ ಉಳಿಸುವ ಜಲವು ನಿನ್ನದು ।
ಉಸಿರು ನೀಡುವ ಗಾಳಿ ನಿನ್ನದು
ಭಾರತ ಮಾತೆ ನೀನೆ ಕಾಣೇ... । ಜೈ
ಭಾರತಾಂಬೆ ನೀನೆ ಕಾಣೇ...
ಭಾರತೀಯರ ಮನವು ನೀನೆ ಕಾಣೇ... ।। 2।।
।।ಅ।। ।।ಪ।।

-ಅಭಿಜ್ಞ ತನ್ವಿ,
ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ದಾವಣಗೆರೆ.

# ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ರೈತರಿಗೆ ಬೆಳೆ ಪ್ರಾತ್ಯಕ್ಷಿಕೆ



ದಾವಣಗೆರೆ, ಆ.16- ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ನಿಕ್ರಾ ಯೋಜನೆಯ ಗ್ರಾಮವಾದ ಅಗಸನಕಟ್ಟೆಯಲ್ಲಿ ತೊಗರಿಯಲ್ಲಿ ಕುಡಿ ಚಿವುಟುವುದನ್ನು ಪದ್ಧತಿ ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿ ಕೊಡಲಾಯಿತು. ಯಂತ್ರದ ಮುಖಾಂತರ ಕುಡಿಗಳನ್ನು ಚೀವುಟುವುದರಿಂದ ಅರೆ ಕೊಂಬುಗಳು ಜಾಸ್ತಿಯಾಗಿ ಇಳುವರಿಯು ಹೆಚ್ಚುತ್ತದೆ.

ಕೂಲಿ ಕಾರ್ಮಿಕರ ಸಮಸ್ಯೆಯಿಂದ ಬಹಳ ರೈತರು ಕುಡಿ ಚಿವುಟುವವುದನ್ನು ಮಾಡುವುದಿಲ್ಲ. ತೊಗರಿಯಲ್ಲಿ ಕುಡಿ ಚಿವುಟುವುದನ್ನು ಮಾಡಿದರೆ, ರೋಗ ಮತ್ತು ಕೀಟಗಳ ಬಾಧೆಯನ್ನು ಕಡಿಮೆ ಮಾಡಬಹುದು ಎಂದು ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರದ ಮುಖ್ಯಸ್ಥ ದೇವರಾಜ ಮಾತನಾಡಿ, ಹೊಸ ತಂತ್ರಜ್ಞಾನಗಳನ್ನು ರೈತರು ಬಳಸುವುದರಿಂದ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು.

ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ಬಸವನಗೌಡ, ಹನುಮಂತಗೌಡ , ರಘುರಾಜ್ ಮತ್ತು ಪ್ರಗತಿಪರ ರೈತರು ಭಾಗವಹಿಸಿದ್ದರು.

# ಅಕ್ರಮ ಗಣಿಗಾರಿಕೆ: ನ್ಯಾಯಕ್ಕಾಗಿ ರೈತನ ಮೊರೆ




ರಾಣೇಬೆನ್ನೂರು, ಆ.16- ತಾಲ್ಲೂಕಿನ ಶಿಡಗನಾಳ ಗ್ರಾಮದ ಕೆ. ಮಲ್ಲೇಶ ತಂದೆ ಕೆ. ಉಮಾಪತಿ ಅವರ ಸರ್ವೆ ನಂ. 76 ರಲ್ಲಿ ಗಣಿಗಾರಿಕೆ ಮಾಡುತ್ತಿರುವ ಸಿ.ಆರ್. ಬಳ್ಳಾರಿ ಅವರು ಪಕ್ಕದ ನನ್ನ ಮಾಲ್ಕಿ ಜಮೀನು ಸರ್ವೆ ನಂ. 77/7 ಗುಂಟೆಯಷ್ಟು ಜಮೀನು ಅತಿಕ್ರಮ ಮಾಡಿಕೊಂಡಿದ್ದು, ನ್ಯಾಯ ದೊರಕಿಸಿಕೊಡುವಂತೆ ರೈತ ಶಂಕರಣ್ಣ ಮಲ್ಲಪ್ಪ ನ್ಯಾಮತಿ ಮನವಿ ಮಾಡಿದ್ದಾರೆ.

ತಮ್ಮ ಜಮೀನಿನಲ್ಲಿ 150 ಅಡಿ ಆಳದಷ್ಟು ಮಣ್ಣು ತೆಗೆದಿದ್ದಾರೆ. ಇಲ್ಲಿ ಯಾವ ರೀತಿಯಲ್ಲೂ ಕೃಷಿ ಮಾಡಲು ಆಗುತ್ತಿಲ್ಲ. ಇದರಿಂದಾಗಿ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ. ತಮಗಾದ ನಷ್ಟವನ್ನು ತುಂಬಿಸಿಕೊಡುವಂತೆ ಸಿ.ಆರ್. ಬಳ್ಳಾರಿ ಅವರನ್ನು ಕೇಳಿದರೆ ನಾವು ಶಾಸಕರ ಕಡೆಯವರು ಎಂದು ಧಮಕಿ ಹಾಕುತ್ತಿದ್ದಾರೆ ಎಂದು ರೈತ ಶಂಕರಣ್ಣ ತನ್ನ ಅಳಲು ತೋಡಿಕೊಂಡಿದ್ದಾರೆ.

ಜಿಲ್ಲಾಧಿಕಾರಿಗಳು, ತಹಶೀಲ್ದಾರರು ಸ್ಥಳ ಪರಿಶೀಲನೆ ನಡೆಸಿ, ತನಗಾದ ನಷ್ಟವನ್ನು ತುಂಬಿಸಿಕೊಡುವಂತೆ ಹಾಗೂ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿರುವುದಾಗಿ ರೈತ ಶಂಕರಣ್ಣ ಪತ್ರಕರ್ತರಿಗೆ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಅಧಿವೇಶನಕ್ಕೆ ಹೊಸತನ

(1ನೇ ಪುಟದಿಂದ) ಮೂರನೇ ವಾರದ ಒಳಗೆ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು. ಆ ವೇಳೆಗೆ ಪರೀಕ್ಷೆ, ತಾಲೀಮು ಹಾಗೂ ಅಂತಿಮ ಪರೀಕ್ಷೆಗಳು ಪೂರ್ಣಗೊಂಡಿರಬೇಕು ಎಂದು ತಿಳಿಸಲಾಗಿತ್ತು. ಈ ಗಡಿಯೊಳಗೆ ಕಾಮಗಾರಿ ಪೂರ್ಣಗೊಳಿಸಲು ರಾಜ್ಯಸಭಾ ಕಾರ್ಯಾಲಯ ಪೂರ್ಣ ಶ್ರಮವಹಿಸುತ್ತಿದೆ.

ಸಾಮಾನ್ಯವಾಗಿ ಸಂಸತ್ತಿನ ಉಭಯ ಸದನಗಳು ಏಕಕಾಲಕ್ಕೆ ಕಾರ್ಯ ನಿರ್ವಹಿಸುತ್ತಿವೆ. ಇದೇ ಮೊದಲ ಬಾರಿ ಒಂದು ಸದನ ಬೆಳಿಗ್ಗೆ ಹಾಗೂ ಮತ್ತೊಂದು ಸಂಜೆ ಕಾರ್ಯ ನಿರ್ವಹಿಸಲಿದೆ ಎದು ಮೂಲಗಳು ಹೇಳಿವೆ.

ಕೊರೊನಾ ಹಿನ್ನೆಲೆಯಲ್ಲಿ ಸಂಸತ್ತಿನ ಬಜೆಟ್ ಅಧಿವೇಶನವನ್ನು ಕಡಿತಗೊಳಿಸಿ ಮಾರ್ಚ್ 23ರಂದು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿತ್ತು. ನಿಯಮಗಳ ಪ್ರಕಾರ ಎರಡು ಅಧಿವೇಶನಗಳ ನಡುವೆ ಆರು ತಿಂಗಳಿಗೂ ಹೆಚ್ಚಿನ ಅಂತರ ಇರಬಾರದು.

ಸದನದ ಚೇಂಬರ್‌ನಲ್ಲಿ ನಾಲ್ಕು ಬೃಹತ್ ತೆರೆಗಳು, ನಾಲ್ಕು ಗ್ಯಾಲರಿಗಳಲ್ಲಿ ಆರು ಸಣ್ಣ ತೆರೆಗಳು, ಧ್ವನಿ ಉಪಕರಣಗಳು, ಸೋಂಕು ನಿವಾರಣೆಗೆ ಅಲ್ಟ್ರಾವೈಲೆಟ್ ಯಂತ್ರಗಳು, ಎರಡು ಸದನಗಳನ್ನು ಸಂಪರ್ಕಿಸುವ ಧ್ವನಿ - ದೃಶ್ಯ ಸಂಕೇತ ಯಂತ್ರಗಳು ಹಾಗೂ ಗ್ಯಾಲರಿಗಳನ್ನು ಚೇಂಬರ್‌ನಿಂದ ಪ್ರತ್ಯೇಕಿಸುವ ಪಾಲಿಕಾರ್ಬೋನೇಟ್ ಶೀಟ್‌ಗಳನ್ನು ಅಳವಡಿಸಲಾಗುತ್ತಿದೆ ಎಂದು ರಾಜ್ಯಭಾ ಕಾರ್ಯಾಲಯದ ಅಧಿಕಾರಿಗಳು ಹೇಳಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಇದೇ ಮೊದಲ ಬಾರಿಗೆ ಇಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ರಾಜ್ಯಸಭಾ ಕಾರ್ಯಾಲಯದ ಅಧಿಕಾರಿಗಳು ಸಂಸದರಿಗೆ ಆಸನಗಳ ವ್ಯವಸ್ಥೆ ಮಾಡುವ ಕುರಿತು ವಿವರವಾದ ಚರ್ಚೆಗಳನ್ನು ನಡೆಸಿದ್ದಾರೆ ಹಾಗೂ ಆ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಹಲವಾರು ಪಕ್ಷಗಳ ಸಂಖ್ಯಾಬಲದ ಆಧಾದ ಮೇಲೆ ಚಂಬರ್ ಹಾಗೂ ಗ್ಯಾಲರಿಗಳಲ್ಲಿ ಅವ ಕಾಶ ಕಲ್ಪಿಸಲಾಗುವುದು. ಲೋಕಸಭಾ ಚೇಂ ಬರ್‌ನ ಎರಡು ಬ್ಲಾಕ್‌ಗಳನ್ನು ಆಡಳಿತಾರೂಢ ಪಕ್ಷ ಹಾಗೂ ಇತರರಿಗೆ ಕಾಯ್ದಿರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಜ್ಯಭೆಯ ಚೇಂಬರ್‌ನ ಸ್ಥಾನಗಳನ್ನು ಪ್ರಧಾನ ಮಂತ್ರಿ, ಸದನದ ನಾಯಕ, ಪ್ರತಿಪಕ್ಷದ ನಾಯಕ ಹಾಗೂ ಇತರ ಪಕ್ಷಗಳ ನಾಯಕರಿಗೆ ಕಾಯ್ದಿರಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್ ಹಾಗೂ ಹೆಚ್.ಡಿ. ದೇವೇಗೌಡ, ಕೇಂದ್ರ ಸಚಿವರೂ ಆಗಿರುವ ರಾಜ್ಯಸಭಾ ಸದಸ್ಯರಾದ ರಾಮ್ ವಿಲಾಸ್ ಪಾಸ್ವಾನ್ ಹಾಗೂ ರಾಮದಾಸ್ ಅಥಾವಲೆ ಅವರಿಗೆ ಚೇಂಬರ್‌ನಲ್ಲಿ ಸ್ಥಾನ ಕಲ್ಪಿಸಲಾಗಿದೆ. ಉಳಿದ ಸಚಿವರು ಆಡಳಿತಾರೂಢ ಪಕ್ಷಗಳ ಸದಸ್ಯರ ಸ್ಥಾನಗಳಲ್ಲಿರಲಿದ್ದಾರೆ.

ಸೀಮಿತ ಸಂಖ್ಯೆಯ ಅಧಿಕಾರಿಗಳು ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ಅವಕಾಶ ನೀಡಲಾಗುವುದು. ತಲಾ 15 ಜನರಿಗೆ ಮಾತ್ರ ಅವಕಾಶ ಸಿಗಲಿದೆ.

# ಅರೆಮಲ್ಲಾಪುರ ಗ್ರಾ.ಪಂ. ಕಚೇರಿ ನೂತನ ಕಟ್ಟಡಕ್ಕೆ ಸ್ಥಳಾಂತರ



**ರಾಣೇಬೆನ್ನೂರು**

ರಾಣೇಬೆನ್ನೂರು, ಆ.16- ತಾಲ್ಲೂಕಿನ ಅರೆಮಲ್ಲಾಪುರ ಗ್ರಾಮದ ಗ್ರಾಮ ಪಂಚಾಯ್ತಿ ಕಚೇರಿಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಸ್ಥಳೀಯ ಶರಣ ಬಸವೇಶ್ವರರ ಮಠದ ಶ್ರೀ ಪ್ರಣವಾನಂದರಾಮ ಸ್ವಾಮಿಗಳ ಸಾನ್ನಿಧ್ಯದಲ್ಲಿ ಶಾಸಕ ಅರುಣಕುಮಾರ್ ಪೂಜಾರ ಉದ್ಘಾಟಿಸಿದರು. ಈ.ಓ. ಶಾಮಸುಂದರ ಕಾಂಬ್ಳೆ, ಅಭಿವೃದ್ಧಿ ಅಧಿಕಾರಿ ಡಿ.ಬಿ. ಹರಿಜನ ಮತ್ತಿತರರು ಪಾಲ್ಗೊಂಡಿದ್ದರು.

# ಕಿಡಿಗೇಡಿಗಳ ಕೃತ್ಯ : ಬ್ರಾಹ್ಮಣರ ಖಂಡನೆ

ದಾವಣಗೆರೆ, ಆ.14- ಶೃಂಗೇರಿಯ ಶ್ರೀ ಶಂಕರಾಚಾರ್ಯ ವೃತ್ತದಲ್ಲಿರುವ ಶ್ರೀ ಆದಿಶಂಕರಾಚಾರ್ಯರ ಪ್ರತಿಮೆ ಇರುವ ಮಂಟಪದ ಮೇಲೆ ಅನ್ಯ ಧರ್ಮದ ಧ್ವಜವನ್ನು ಕಿಡಿಗೇಡಿಗಳು ಹಾಕಿರುವುದನ್ನು ದಾವಣಗೆರೆ ಜಿಲ್ಲಾ ಬ್ರಾಹ್ಮಣ ಸಮಾಜ ಸೇವಾ ಸಂಘ ಹಾಗೂ ಶ್ರೀ ಶಂಕರ ಸೇವಾ ಸಂಘವು ಖಂಡಿಸುತ್ತದೆ ಎಂದು ಸಂಘದ ಅಧ್ಯಕ್ಷ ಡಾ. ಬಿ.ಟಿ. ಅಚ್ಯುತ್ ತಿಳಿಸಿದ್ದಾರೆ.

ಈ ರೀತಿ ಸಮಾಜದ ಶಾಂತಿಯನ್ನು ಹಾಳು ಮಾಡಲು ಪ್ರಯತ್ನಿಸುವ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಮುಖ್ಯಮಂತ್ರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದವರು ಹೇಳಿದ್ದಾರೆ.

ತಕ್ಷಣ ಬೇಕಾಗಿದ್ದಾರೆ
ದಾವಣಗೆರೆ, ಹರಪನಹಳ್ಳಿ, ಜಗಳೂರು ತಾಲ್ಲೂಕಿಗೆ
ಮ್ಯಾಸ್ಸೆ ಫರ್ಗ್ಯೂಸನ್ ಟ್ರ್ಯಾಕ್ಟರ್‌ಗಳನ್ನು
ಮಾರಾಟ ಮಾಡಲು 'ಸೇಲ್ಸ್‌ಆಫೀಸರ್'ಗಳು ಬೇಕಾಗಿದ್ದಾರೆ.
ಆಕರ್ಷಕ ಸಂಬಳ + TA, DA + Incentive.
ದ್ವಿಚಕ್ರ ವಾಹನವುಳ್ಳವರಿಗೆ ಮಾತ್ರ
ಸಂಪರ್ಕಿಸಿ : ದಾವಣಗೆರೆ ಟ್ರ್ಯಾಕ್ಟರ್ ಕಂಪನಿ
ಅಧಿಕೃತ ಮಾರಾಟಗಾರರು : MASSEY FERGUSON
ವಾಲವಲ್ಕರ್ ಪೆಟ್ರೋಲ್ ಬಂಕ್ ಹಿಂಭಾಗ, ಪಿ.ಬಿ. ರಸ್ತೆ, ದಾವಣಗೆರೆ.
9606052294, 9731180442

ಮಹಿಳಾ ಸೇವಾ ಸಮಾಜ (ರಿ.)
ಮಹಿಳಾ ಸಮಾಜ ಪ್ರಥಮ ದರ್ಜೆ (ಪದವಿ) ಮಹಿಳಾ ಕಾಲೇಜು
(ಅಕ್ಕಮಹಾದೇವಿ ವಿಶ್ವವಿದ್ಯಾಲಯ, ಬಿಜಾಪುರ ಇದರ ವ್ಯಾಪ್ತಿಗೆ ಒಳಪಟ್ಟು, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಅಶೋಕ ರಸ್ತೆ, ದಾವಣಗೆರೆ-577 002. ಫೋನ್ : 233010, 230084



2020-21ನೇ ಸಾಲಿನ ಪದವಿ ತರಗತಿಗಳಿಗೆ ಪ್ರವೇಶ ಪ್ರಕಟಣೆ

ವಿಷಯ ಸಂಯೋಜನೆಗಳು : 1. ಭಾಷಾ ವಿಷಯಗಳು : ಕನ್ನಡ, ಇಂಗ್ಲಿಷ್, ಹಿಂದಿ
2. ಐಚ್ಛಿಕ ವಿಷಯ ಸಂಯೋಜನೆಗಳು :
B.A. : ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ (H.P.S.)
ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ (H.E.P.)
ಇತಿಹಾಸ, ಐಚ್ಛಿಕ ಕನ್ನಡ, ಸಮಾಜಶಾಸ್ತ್ರ (H.K.S.)
ಇತಿಹಾಸ, ಐಚ್ಛಿಕ ಇಂಗ್ಲಿಷ್, ಅರ್ಥಶಾಸ್ತ್ರ (H.E.E.)
B.Com : ಬ್ಯಾಚುಲರ್ ಆಫ್ ಕಾಮರ್ಸ್
B.C.A. : ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್
B.B.A. : ಬ್ಯಾಚುಲರ್ ಆಫ್ ಬಿಸಿನೆಸ್ ಅಡ್‌ಮಿನಿಸ್ಟ್ರೇಷನ್
ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

ಕಾಲೇಜಿನ ವೈಶಿಷ್ಠತೆ : ✿ ಕಾಲೇಜ್ ನಗರದ ಮಧ್ಯ ಭಾಗದಲ್ಲಿದೆ. ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್‌ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ.
✿ ವಿಶಾಲವಾದ ಕಟ್ಟಡ ✿ ಸುಸಜ್ಜಿತವಾದ ಗ್ರಂಥಾಲಯ ✿ ಅನುಭವಿ ಉಪನ್ಯಾಸಕರಿಂದ ಬೋಧನೆ
✿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ✿ ಹೆಣ್ಣು ಮಕ್ಕಳಿಗೆ ವಿಶೇಷವಾದ ಭದ್ರತೆ ಹಾಗೂ ವೈಯಕ್ತಿಕ ಗಮನ ✿ ಮಾಸಿಕ ಪರೀಕ್ಷೆಗಳ ಮೂಲಕ ಪ್ರಗತಿಯೆಡೆಗೆ

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 10.30 ರಿಂದ 2 ಗಂಟೆಯವರೆಗೆ ವಿತರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು
ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ

## ತುಂಗ, ಭದ್ರಾ ಜಲಾಶಯಗಳಿಗೆ ನೀರಿನ ಒಳಹರಿವು ಹೆಚ್ಚಳ

ಶಿವಮೊಗ್ಗ, ಆ.16- ಮಲೆನಾಡಿನಲ್ಲಿ ಬಿಡುವು ನೀಡಿದ್ದ ಮಳೆ ಭಾನುವಾರದಿಂದ ಮತ್ತೆ ಪ್ರಾರಂಭವಾಗಿದೆ. ಇದರಿಂದಾಗಿ ತುಂಗ, ಭದ್ರಾ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ತುಂಗಾ, ಭದ್ರಾ ಜಲಾಶಯಗಳಿಗೆ ಒಳಹರಿವು ಹೆಚ್ಚಳವಾಗಿದೆ. ಗಾಜನೂರಿನ ತುಂಗಾ ಜಲಾಶಯಕ್ಕೆ ಭಾನುವಾರ ಬೆಳಿಗ್ಗೆ 12 ಸಾವಿರ ಕ್ಯೂಸೆಕ್ಸ್ ಇದ್ದ ನೀರಿನ ಒಳಹರಿವು ಸಂಜೆ 34 ಸಾವಿರ ಕ್ಯೂಸೆಕ್ಸ್ ಏರಿಕೆಯಾಗಿದೆ. ಒಳಬರುವ 34 ಸಾವಿರ ಕ್ಯೂಸೆಕ್ಸ್ ನೀರನ್ನು ತುಂಗ ಭದ್ರಾ ನದಿಗೆ ಬೀಡಲಾಗಿದೆ. ಭದ್ರಾ ಜಲಾಶಯಕ್ಕೆ ಭಾನುವಾರ ಸಂಜೆ ಒಳಹರಿವು ಹೆಚ್ಚಾಗುತ್ತಿದ್ದು, ನೀರನಮಟ್ಟ 178 ಅಡಿ 5 ಇಂಚು ಆಗಿತ್ತು.

## ಮಲೇಬೆನ್ನೂರು ಹೋಬಳಿಯಲ್ಲಿ 10 ಜನರಿಗೆ ಕೊರೊನಾ ಪಾಸಿಟಿವ್

ಮಲೇಬೆನ್ನೂರು, ಆ.16- ಹೋಬಳಿಯಲ್ಲಿ ಭಾನುವಾರ 10 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢಪಟ್ಟಿವೆ. ಪಟ್ಟಣದ ಕಲ್ಲೇಶ್ವರ ಬಡಾವಣೆಯ 33 ವರ್ಷದ ಮಹಿಳೆಗೆ ಮತ್ತು ಕೊಮಾರನಹಳ್ಳಿಯಲ್ಲಿ 46 ವರ್ಷದ ವ್ಯಕ್ತಿಗೆ, ಉಕ್ಕಡಗಾತ್ರಿಯಲ್ಲಿ 29 ವರ್ಷದ ಯುವಕನಿಗೆ, ಕಮಲಾಪುರದಲ್ಲಿ 32 ವರ್ಷದ ಯುವಕನಿಗೆ, ಕೊಕ್ಕನೂರಿನಲ್ಲಿ 28 ವರ್ಷ ವಯಸ್ಸಿನ ಇಬ್ಬರು ಮಹಿಳೆಯರಿಗೆ, ಕಮಲಾಪುರದಲ್ಲಿ 48 ವರ್ಷದ ಮಹಿಳೆಗೆ, ಕೊಪ್ಪದಲ್ಲಿ 26 ವರ್ಷದ ಯುವಕನಿಗೆ, ಬಿಳಸನೂರಿನಲ್ಲಿ 17 ವರ್ಷದ ಬಾಲಕನಿಗೆ ಹಾಗೂ ಕುಂಬಳೂರಿನಲ್ಲಿ 31 ವರ್ಷದ ಯುವಕನಿಗೆ ಸೋಂಕು ತಗುಲಿದೆ ಎಂದು ಉಪತಹಶೀಲ್ದಾರ್ ಆರ್.ರವಿ ಮಾಹಿತಿ ನೀಡಿದ್ದಾರೆ.

# ವಿಜ್ಞಾನ, ತಂತ್ರಜ್ಞಾನದ ಪರಿಣಾಮ ಕೃಷಿಯ ಒಲವು ಕಡಿಮೆ

### 'ಮತ್ತೆ ಕಲ್ಯಾಣ' ಅಂತರ್ಜಾಲ ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀ


ಸಾಣೇಹಳ್ಳಿ, ಅ. 16- ಭಾರತ ಕೃಷಿ ಪ್ರಧಾನ ದೇಶ. ನಮ್ಮ ಹಿರಿಯರಿಗೆ ಕೃಷಿ ಪವಿತ್ರ ಕಾಯಕ. ಅದರಲ್ಲೇ ಶಿವನನ್ನು ಕಾಣುವ ಧರ್ಮಶ್ರದ್ಧೆ ಇತ್ತು. ನಾಗರೀಕತೆ, ವಿಜ್ಞಾನ, ತಂತ್ರಜ್ಞಾನದ ಪರಿಣಾಮ ಇತ್ತೀಚಿನ ವರ್ಷಗಳಲ್ಲಿ ಕೃಷಿಯ ಒಲವು ಮತ್ತು ಅದಕ್ಕಿದ್ದ ಪಾವಿತ್ರ್ಯ ಕಡಿಮೆ ಆಗಿದೆ ಎಂದು ಸಾಣೇಹಳ್ಳಿ ಶ್ರೀ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಶ್ರೀಮಠದಿಂದ ಆಯೋಜನೆಗೊಂಡಿರುವ 'ಮತ್ತೆ ಕಲ್ಯಾಣ ಅಂತರ್ಜಾಲ ಉಪನ್ಯಾಸ ಮಾಲಿಕೆ'ಯ ಭಾನುವಾರ ನಡೆದ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಶ್ರೀಗಳು ಮಾತನಾಡಿದರು.

ಹಿಂದೆ ಕೃಷಿ ಮಾಡುತ್ತಿದ್ದವರು ಬಹುತೇಕ ಅವಿದ್ಯಾವಂತರು. ಆದರೆ ಇವತ್ತಿನ ಯಾವ ಕೃಷಿ ವಿಜ್ಞಾನಿಗಳಿಗೂ ಗೊತ್ತಿಲ್ಲದ ಕೃಷಿಜ್ಞಾನ ಅವರಲ್ಲಿತ್ತು. ಹೆಚ್ಚು ಹೆಚ್ಚು ಓದಿ, ವಿಭಿನ್ನ ಪದವಿ ಪಡೆದವರೆಲ್ಲ ಕೃಷಿಗೆ ಕೈಕೊಟ್ಟು ಬೇರೆ ಬೇರೆ ಉದ್ಯೋಗ ಅರಸಿಕೊಂಡು ನಗರಗಳತ್ತ ಮುಖ ಮಾಡಿದರು, ಈಗಲೂ ಮಾಡುತ್ತಿದ್ದಾರೆ. ಹಲವರು ಊರಲ್ಲಿದ್ದ ಭೂಮಿ, ಮನೆಯನ್ನು ಸಹ ಮಾರಿ ಪಟ್ಟಣವಾಸಿಗಳಾಗಿದ್ದಾರೆ. ಈಗಲೂ ವಲಸೆ ಹೋಗುವುದು ನಿಂತಿಲ್ಲ. ಇದೇನು ಪ್ರಗತಿಯ ಸಂಕೇತವೋ? ಅವನತಿಯ ದ್ಯೋತಕವೋ? ಕಾಲವೇ ಉತ್ತರಿಸಬೇಕಾಗಿದೆ ಎಂದು ಹೇಳಿದರು.

12ನೆಯ ಶತಮಾನದ ಶರಣರಿಗೆ ಕೃಷಿಯ ವ್ಯಾಪಕ ಅರಿವಿದ್ದುದು ಅನೇಕ ವಚನಗಳಿಂದ ತಿಳಿದುಬರುತ್ತದೆ. ಕಾರಣ ಅವರೆಲ್ಲರೂ ಮೂಲತಃ ಕಾಯಕ ಜೀವಿಗಳು. ಅತ್ಯಂತ ತಳವರ್ಗದಿಂದ ಬಂದವರು. ಓದು, ಬರಹಗಳಿಂದ ವಂಚಿತರಾದವರು. ಅನುಭವಮಂಟಪ ಅವರಿಗೆ ಒಂದು ವ್ಯಕ್ತಿತ್ವ ತಂದುಕೊಟ್ಟಿತು. ನೀವು ಯಾರಿಗೇನು ಕಡಿಮೆ ಇಲ್ಲ. ನಿಮ್ಮದೇ ನಿಜವಾದ ಕಾಯಕ ಎಂದು ಅವರವರ ಕಾಯಕದ ಬಗ್ಗೆ ಮತ್ತಷ್ಟು ಗೌರವ ಮೂಡುವ ಹಾಗೆ ಮಾಡಿತು. ಇದರ ಫಲವಾಗಿ ಅವರು ಬಾಹ್ಯ ಕೃಷಿಯ ಜೊತೆಗೆ ಆಧ್ಯಾತ್ಮಿಕ ಮತ್ತು ಸಾಹಿತ್ಯ ಕೃಷಿಯನ್ನೂ ಮಾಡಲಾರಂಭಿಸಿದರು. ಈ ಮೂರೂ ಕೃಷಿಗಳು ಸೇರಿದಾಗಲೇ ಮನುಷ್ಯನಿಗೆ ನೆಲೆ, ಬೆಲೆ ಎಂದು ತೋರಿಸಿಕೊಟ್ಟರು ಎಂದರು.

ಶರಣರ ದೃಷ್ಟಿಯಲ್ಲಿ ಕೃಷಿ ಕುರಿತಂತೆ ಚಿಂತಕ ಡಾ.





ಎಂ.ಜಿ. ಈಶ್ವರಪ್ಪ ಮಾತನಾಡಿ, ಇಂದಿನ ತಳಮಳದ ಸ್ಥಿತಿಗೆ 'ಮತ್ತೆ ಕಲ್ಯಾಣ' ಧ್ಯಾನಶೀಲ, ಚಲನಶೀಲ ಕಾರ್ಯಕ್ರಮವಾಗಿ ಜನತೆಗೆ ನೆಮ್ಮದಿ ನೀಡುತ್ತಿದೆ ಎಂದು ಹೇಳಿದರು.

ಕಲ್ಯಾಣದ ಕಲ್ಪನೆ ಅನನ್ಯವಾದುದು. ವಿಶ್ವಕ್ಕೇ ಮಾದರಿಯಾದುದು. ಶರಣರು ಸಾಹಿತ್ಯಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಕ್ರಾಂತಿಕಾರಕ ಬದಲಾವಣೆ ಮಾಡಿದರು. ವಿದ್ವಾಂಸರಿಗೆ ಸೀಮಿತವಾಗಿದ್ದ ಹಳಗನ್ನಡ, ಸಂಸ್ಕೃತದಂಥ ಅರಮನೆಯ ಭಾಷೆಗಳನ್ನು

> ಇಂದಿನ ತಳಮಳದ ಸ್ಥಿತಿಗೆ 'ಮತ್ತೆ ಕಲ್ಯಾಣ' ಧ್ಯಾನಶೀಲ, ಚಲನಶೀಲ ಕಾರ್ಯಕ್ರಮವಾಗಿ ಜನತೆಗೆ ನೆಮ್ಮದಿ ನೀಡುತ್ತಿದೆ.
> - ಡಾ.ಎಂ.ಜಿ. ಈಶ್ವರಪ್ಪ

ಬಿಟ್ಟು ಕನ್ನಡದಲ್ಲಿ, ಸಾಮಾನ್ಯರ ಭಾಷೆಯಲ್ಲಿ ಸೃಜನಶೀಲ ವಚನ ಸಾಹಿತ್ಯ ಬರೆದಿದ್ದಾಗಿ ಹೇಳಿದರು.

ಆರಂಭದಲ್ಲಿ ಶಿವಸಂಚಾರದ ಕಲಾವಿದರಾದ ಕೆ ಜ್ಯೋತಿ, ಕೆ ದಾಕ್ಷಾಯಣಿ ಮತ್ತು ಹೆಚ್ ಎಸ್ ನಾಗರಾಜ್ ತಬಲ ಸಾಥಿ ಶರಣ್ ಕುಮಾರ್ ವಚನಗೀತೆಗಳನ್ನು ಹಾಡಿದರು. ಕಲ್ಯಾಣಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ದಾವಣಗೆರೆಯ ಕಕ್ಕರಗೊಳ್ಳದ ಕೆ.ಬಿ. ಪರಮೇಶ್ವರಪ್ಪ ಸ್ವಾಗತಿಸಿದರು. ದಾವಣಗೆರೆಯ ಶ್ರೀಮತಿ ಲತಾ ಮತ್ತು ಲೋಕಿಕೆರೆ ನಾಗರಾಜ್ ದಂಪತಿಗಳು ಇಂದಿನ ಕಾರ್ಯಕ್ರಮದ ದಾಸೋಹಿಗಳಾಗಿದ್ದರು.

# ಅನ್ನ, ಅಕ್ಷರ, ಜ್ಞಾನ ದಾಸೋಹಗಳಿಗೆ ಮಹತ್ವ ನೀಡಿದ್ದ ಅನ್ನದಾನೇಶ್ವರ ಶ್ರೀ




### ಅನ್ನದಾನೇಶ್ವರ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಆ. 16 - ಸ್ವಾತಂತ್ರ್ಯ ಪೂರ್ವದಲ್ಲಿಯೇ ಶ್ರೀ ಅನ್ನದಾನೇಶ್ವರ ಸ್ವಾಮೀಜಿಗಳು ಅನ್ನ ದಾಸೋಹ, ಅಕ್ಷರ ದಾಸೋಹ, ಜ್ಞಾನ ದಾಸೋಹಕ್ಕೆ ಮಹತ್ವ ನೀಡಿದ್ದರು ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಅನ್ನದಾನೇಶ್ವರ ಶಾಖಾಮಠದಲ್ಲಿ ಶ್ರೀ ಹಾಲಕೆರೆ ಅನ್ನದಾನೇಶ್ವರ ಸಾರ್ವಜನಿಕ ಸೇವಾ ಟ್ರಸ್ಟ್ ನಿಂದ ಇಂದು ನಡೆದ ಲಿಂ. ಶ್ರೀಗಳ 43ನೇ ಪುಣ್ಯಾರಾಧನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಆದರ್ಶ, ಪ್ರತಿಭಾನ್ವಿತ, ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹದಾಯಕ ಸನ್ಮಾನ ಮಾಡಿ ಪ್ರತಿಭಾ ಪುರಸ್ಕಾರವನ್ನು ಶಾಖಾ ಮಠವೂ ನೀಡುತ್ತಾ ಬಂದಿದೆ ಎಂದರು.

ಪ್ರತಿವರ್ಷ ಪುಣ್ಯಾರಾಧನೆ ಸಮಾರಂಭದಲ್ಲಿ ಜಿಲ್ಲೆಯಾದ್ಯಂತ ಸುಮಾರು ನೂರಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿತ್ತು. ಈ ಬಾರಿ ಕೊರೋನ್ ಆದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಸಹ ಈ ಸೇವಾ ಸಮಿತಿಯವರು ಸರಳವಾಗಿ ಕಾರ್ಯಕ್ರಮ ಆಯೋಜಿಸಿ ಕೇವಲ ಮೂರು ವಿದ್ಯಾರ್ಥಿಗಳಿಗೆ ಪುರಸ್ಕರಿಸುವ ಕೆಲಸ ಮಾಡಿದ್ದಾರೆ.

ನಮಗೆ ಮುಖ್ಯವಾಗಿ ಉತ್ತಮ ಆರೋಗ್ಯ ಬೇಕು. ನಿಮಗೆ ಏನು ಬೇಕು ಎಂದು ಕೇಳಿದರೆ ಎಲ್ಲರೂ ನಮ್ಮ ಮನೆಗೆ, ನಮ್ಮ ಊರಿಗೆ, ನಮ್ಮ ದೇಶಕ್ಕೆ ಕೊರೊನಾ ಬಾರದಿರಲಿ, ಅದು ವಾಪಸ್ ಹೋಗಲಿ ಎಂದು ಕೇಳುತ್ತಾರೆ. ಈ ಮಹಾಮಾರಿ ಕೊರೊನಾ ಮಠಾಧೀಶರು ಮಂತ್ರಿಗಳು ಅಧಿಕಾರಿಗಳು ಯಾರನ್ನು ಬಿಟ್ಟಿಲ್ಲ ಪ್ರತಿಯೊಬ್ಬರೂ ಮನೆಯಲ್ಲಿಯೇ ನಿಂಬೆಹಣ್ಣಿನ ರಸ ಶುಂಠಿ ಕಷಾಯ ಸೇವಿಸಿದರೆ ಕೊರೊನಾದಿಂದ ಮುಕ್ತರಾಗಲು ಸಾಧ್ಯ ಎಂದರು.

ಪ್ರತಿಯೊಬ್ಬರೂ ಸಹ ಮಾಸ್ಕ್, ಸ್ಯಾನಿಟೈಸರ್ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದರಿಂದ ಕೊರೊನಾದಿಂದ ದೂರ ಇರಲು ಸಾಧ್ಯ ಎಂದರು ಹಿಂದಿನ ಪೂರ್ವಜರು ಹೇಳಿದಂತೆ ಹೊರಗಡೆಯಿಂದ ಬಂದಾಗ ಕೈಕಾಲು ತೊಳೆದುಕೊಳ್ಳುವುದು ಮುಖ ತೊಳೆಯುವುದು ಹಿರಿಯರ ಹೇಳಿಕೆಗಳು ಈಗ ಕೊರೊನಾದಿಂದ ಎಲ್ಲರನ್ನೂ ಎಚ್ಚರಿಸುತ್ತಿವೆ ಎಂದು ತಿಳಿಸಿದರು..

ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ 625ಕ್ಕೆ 619 ಅಂಕಗಳಿಸಿದ ತ್ರಿಶೂಲ್ ಶಾಲೆಯ ವಿದ್ಯಾರ್ಥಿನಿ ಮೇಘನ, ದ್ವಿತೀಯ ಪಿಯುಸಿಯಲ್ಲಿ ಶೇಕಡ 88ರಷ್ಟು ಅಂಕಗಳಿಸಿದ ಅಥಣಿ ಪಿಯು ಕಾಲೇಜಿನ ವೀರೇಶ್ ಹುದ್ದಾರ್, ಆರ್. ಜಿ. ಕಾಲೇಜಿನ ವಿದ್ಯಾರ್ಥಿನಿ ಕಾವ್ಯ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಅಮರಯ್ಯ ಗುರುವಿನಮಠ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು 'ಇಂದಿನ ಸುದ್ದಿ' ಪತ್ರಿಕೆ ಸಂಪಾದಕ ವೀರಪ್ಪ ಎಂ. ಬಾವಿ, ಟ್ರಸ್ಟ್ ಕಾರ್ಯದರ್ಶಿ ಎನ್. ಅಡಿವೆಪ್ಪ, ಶಿವಪುತ್ರಪ್ಪ ನಾಗರಾಜ್ ಯರಗಲ್ ಇತರರು ಇದ್ದರು.

ಶ್ರೀಮತಿ ಸುಜಾತ ಕಾರ್ಯಕ್ರಮ ನಿರೂಪಿಸಿದರು.

## ಇಂದಿನ ಕಡೇ ಶ್ರಾವಣ ಸೋಮವಾರ ಆನೆಕೊಂಡದ ಕಾರಣಿಕ, ಜಾತ್ರೆ ರದ್ದು



ಕಡೇ ಶ್ರಾವಣ ಸೋಮವಾರವಾದ ಇಂದು ನಡೆಯಬೇಕಿದ್ದ ಐತಿಹಾಸಿಕ ಶ್ರೀ ಕ್ಷೇತ್ರ ಆನೆಕೊಂಡ ಕಾರಣಿಕ ಮತ್ತು ಜಾತ್ರೆಯನ್ನು ರದ್ದುಪಡಿಸಲಾಗಿದೆ ಎಂದು ದೇವಸ್ಥಾನ ಸಮಿತಿಯ ಪಿ.ಬಿ. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಆನೆಕೊಂಡದ ಶ್ರೀ ಬಸವೇಶ್ವರ, ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ, ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿ ಮತ್ತು ಸುತ್ತಮುತ್ತಲಿನ ಗ್ರಾಮದ ದೇವರುಗಳನ್ನೊಳಗೂಡಿ ಕಾರಣಿಕ ಮಹೋತ್ಸವ ನಡೆಯಬೇಕಿತ್ತು. ಆದರೆ, ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಆದೇಶದ ಮೇರೆಗೆ ಜಾತ್ರೆಯನ್ನು ರದ್ದುಪಡಿಸಲಾಗಿದೆ. ದೇವಸ್ಥಾನದಲ್ಲಿ ದೇವರ ದರ್ಶನ ಎಂದಿನಂತೆ ಇರುತ್ತದೆ ಎಂದು ಅವರು ವಿವರಿಸಿದ್ದಾರೆ.



## ಕತ್ತಲಗೆರೆಗೆ ಇಂದು ಕೃಷಿ ಸಚಿವ ಬಿ.ಸಿ. ಪಾಟೀಲ್

ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಇಂದು ಬೆಳಿಗ್ಗೆ ಹಿರೇಕೆರೂರಿನಿಂದ ಹೊರಟು, ಬೆಳಿಗ್ಗೆ 11.30 ಗಂಟೆಗೆ ಚನ್ನಗಿರಿ ತಾಲ್ಲೂಕು ಕತ್ತಲಗೆರೆ ಗ್ರಾಮಕ್ಕೆ ಆಗಮಿಸುವರು. ನಂತರ ರೈತರ ಬೆಳೆ ಸಮೀಕ್ಷೆ ಉತ್ಸವದ ಮೊಬೈಲ್ ಆ್ಯಪ್ ಬಳಕೆ ಕುರಿತು ಪ್ರಾತ್ಯಕ್ಷತೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಖಾಸಗಿ ಕಾರ್ಯಕ್ರಮವೊಂ ದರಲ್ಲಿ ಭಾಗವಹಿಸುವ ಸಚಿವರು, ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.




## ವಿದ್ಯುತ್ ಕಂಬಗಳಿಗೆ ಬ್ಯಾನರ್ ಕಟ್ಟದಿರಲು ಬೆಸ್ಕಾಂ ಕರೆ

ದಾವಣಗೆರೆ, ಆ.16- ದಾವಣಗೆರೆ ನಗರ ಉಪವಿಭಾಗ-1ರ ವ್ಯಾಪ್ತಿಯಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ, ವೃತ್ತಗಳಲ್ಲಿ ವಿದ್ಯುತ್ ಕಂಬಗಳಿಗೆ ಬ್ಯಾನರ್ ಹಾಗೂ ಬಂಟಿಂಗ್ಸ್‌ಗಳನ್ನು ಕಟ್ಟಿರುವುದು ಕಂಡು ಬಂದಿರುತ್ತದೆ. ಅನೇಕ ಶಾಲಾ - ಕಾಲೇಜುಗಳ ಆಡಳಿತ ಮಂಡಳಿಗಳು ತಮ್ಮ ಶಾಲಾ-ಕಾಲೇಜುಗಳಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಶುಭಾಷಯಗಳನ್ನು ಕೋರುವ ಹಾಗೂ ದಾಖಲಾತಿ ಪ್ರಕಟಣಗಳನ್ನು ವಿದ್ಯುತ್ ವಿತರಣಾ ವ್ಯವಸ್ಥೆಯ ಕಂಬಗಳಿಗೆ ಕಟ್ಟಿರುವುದು ವಿಷಾದನೀಯ. ಈ ಕುರಿತು ಜಾಗೃತಿ ಮೂಡಿಸಿದ್ದರೂ, ಪ್ರಕರಣಗಳು ಮರುಕಳಿಸುತ್ತಿದೆ. ಒಂದು ವೇಳೆ ಯಾವುದೇ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ಸಂಬಂಧಿಸಿದ ಆಡಳಿತ ಮಂಡಳಿಯವರೇ ನೇರ ಹೊಣೆಗಾರರು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

## ಎಂ.ಎಸ್. ಶ್ರೇಷ್ಠಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ. 99.04



ಹರಿಹರ, ಆ.16 - ಕುಮಾರಪಟ್ಟಣಂ ಅಮೃತವರ್ಷಿಣಿ ವಿದ್ಯಾಲಯ ವಿದ್ಯಾರ್ಥಿನಿ ಎಂ.ಎಸ್. ಶ್ರೇಷ್ಠ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 619 (99.04) ಅಂಕಗಳನ್ನು ಗಳಿಸಿದ್ದಾಳೆ. ಶ್ರೇಷ್ಠ, ಚದುರಂಗದಲ್ಲಿ ರಾಜ್ಯ, ಜಿಲ್ಲಾ ಮಟ್ಟದ ಪಂದ್ಯಾವಳಿಗಳನ್ನಾಡಿದ್ದು, ಹರಿಹರದ ಎಂ. ಆರ್. ಶ್ರೀಧರ್ - ಸುಚೇತಾ ದಂಪತಿಗಳ ಪುತ್ರಿ.

## 'ಕರುಣಾ' ಟ್ರಸ್ಟ್‌ನಲ್ಲಿ ಸಸಿಗಳು ಲಭ್ಯ

ದಾವಣಗೆರೆ, ಆ.16- ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಹೊಂಗೆ, ಬೇವು, ಬೆಟ್ಟದ ನೆಲ್ಲಿ ಸಸಿಗಳು ಲಭ್ಯವಿದ್ದು, ಅವಶ್ಯಕತೆ ಮತ್ತು ಆಸಕ್ತಿಯುಳ್ಳವರು ಸಂಪರ್ಕಿಸುವುದು. ಮೊ: 9538024422

## ಇ ಎಸ್ ಐ ನಿವೇಶನದಲ್ಲಿ ಸ್ಥಳೀಯ ಕಚೇರಿ, ನೌಕರರಿಗೆ ವಸತಿ ನಿರ್ಮಿಸಲು ಒತ್ತಾಯ



ದಾವಣಗೆರೆ,ಆ.16- ನಗರದ ಇಎಸ್‌ಐ ಜಾಗಕ್ಕೆ ನಿನ್ನೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಜಾಗದಲ್ಲಿ ಲೋಕಲ್ ಆಫೀಸ್ ಮತ್ತು ನೌಕರರ ವಸತಿ ಸಮುಚ್ಚಯ ನಿರ್ಮಿಸುವಂತೆ ಹಿರಿಯ ಕಾರ್ಮಿಕ ಮುಖಂಡ ಹಾಗೂ ಎಐಟಿಯುಸಿ ಜಿಲ್ಲಾ ಅಧ್ಯಕ್ಷ ಕಾಂ. ಹೆಚ್. ಕೆ. ರಾಮಚಂದ್ರಪ್ಪ ಒತ್ತಾಯಿಸಿದರು.

ನಗರದ ಡಾಂಗೆ ಪಾರ್ಕ್ ಸರ್ಕಲ್ ಬಳಿಯಿರುವ ಇ ಎಸ್ ಐ ಜಾಗಕ್ಕೆ ಕಾರ್ಮಿಕರ ಮನವಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಕಾರ್ಮಿಕ ಮುಖಂಡರ ಮನವಿಯನ್ನು ಆಲಿಸಿ ಶೀಘ್ರದಲ್ಲೇ ಈ ಸ್ಥಳದಲ್ಲಿ ಇಎಸ್‌ಐ ಲೋಕಲ್ ಆಫೀಸ್ ನೌಕರರಿಗೆ ವಸತಿ ಸಮುಚ್ಚಯ ಸ್ಥಳೀಯ ಡಿಸ್ಪೆಂಸರಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು, ಆನಂದ ರಾಜ್, ವಾಸು, ಸುರೇಶ್, ಸರೋಜಾ, ಶಾರದಮ್ಮ, ಎನ್. ಎಚ್. ರಾಮಣ್ಣ ಹಾಗೂ ಇತರರು ಉಪಸ್ಥಿತರಿದ್ದರು.


# ಆ್ಯಪ್ ಮೂಲಕ ರೈತರೇ ಮಾಹಿತಿ ದಾಖಲಿಸಬಹುದು

ದಾವಣಗೆರೆ, ಆ.16- ಈ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯನ್ನು ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಮೂಲಕ ಕೈಗೊಳ್ಳಲಾಗುತ್ತಿದೆ.

ರೈತರು ತಮ್ಮ ಜಮೀನುಗಳಲ್ಲಿ ತಾವು ಬೆಳೆದ ಬೆಳೆಗಳ ಮಾಹಿತಿಯನ್ನು ಛಾಯಾಚಿತ್ರ ಸಹಿತ ಅಪ್‌ಲೋಡ್ ಮಾಡುವ ಒಂದು ವಿನೂತನ ಯೋಜನೆಯಾಗಿದೆ. ರೈತರು ಗೂಗಲ್ ಪ್ಲೇ ಸ್ಟೋರ್ ಮೂಲಕ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವ ಮೂಲಕ ತಮ್ಮ ಜಮೀನುಗಳಲ್ಲಿ ಬೆಳೆದ ಮುಂಗಾರು ಹಂಗಾಮಿನ ಬೆಳೆ ಮಾಹಿತಿಯನ್ನು ತಾವೇ ದಾಖಲು ಮಾಡಬಹುದು. ಅಥವಾ ಖಾಸಗಿ ನಿವಾಸಿಗಳ ಸಹಯೋಗದೊಂದಿಗೆ ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ದಾಖಲಿಸಬಹುದಾಗಿದೆ.

ರೈತ ಬಾಂಧವರು ತಮ್ಮ ಜಮೀನುಗಳ ಮುಂಗಾರು ಬೆಳೆ ಮಾಹಿತಿಯನ್ನು ಬೆಳೆ ಸಮೀಕ್ಷೆ ಆ್ಯಪ್ ಮೂಲಕ ತಾವೇ ದಾಖಲಿಸಿಕೊಳ್ಳಲು ತಿಳಿಸಿದೆ. ಬೆಳೆ ಸಮೀಕ್ಷೆ ಕೈಗೊಳ್ಳಲು ಗ್ರಾಮ ಮಟ್ಟದಲ್ಲಿ ಪ್ರತಿ ಗ್ರಾಮಗಳಿಗೆ ಖಾಸಗಿ ನಿವಾಸಿಗಳನ್ನು (ಖಾಸಗಿ ಸಮೀಕ್ಷೆದಾರರು) ಆಯ್ಕೆ ಮಾಡಲಾಗಿದ್ದು, ರೈತರು ಬೆಳೆ ಸಮೀಕ್ಷೆ ಕೈಗೊಳ್ಳು ವಾಗ ಖಾಸಗಿ ನಿವಾಸಿಗಳ ಸಹಕಾರ ಪಡೆಯಬಹುದಾಗಿದೆ.

ರೈತರು ತಮ್ಮ ಮೊಬೈಲ್‌ನಲ್ಲಿ ಬೆಳೆ ಸಮೀಕ್ಷೆ ಕೈಗೊಳ್ಳಲು ಆ.24 ಕೊನೆಯ ದಿನವಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು ಕೃಷಿ ಇಲಾಖೆ, ಕಂದಾಯ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಮತ್ತು ಗ್ರಾಮ ಪಂಚಾಯ್ತಿಗಳಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.




JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte